# ವಿಹಂಗಮ

## ಕನ್ನಡದ ಕವಲುಗಳ ಸಂಗಮ



ಪ್ರಧಾನ ಸಂಪಾದಕರು

• ಪ್ರೊ. ಬಿ.ಬಿ. ಡೆಂಗನವರ • ಡಾ. ಆರ್. ವಿ. ಪಾಟೀಲ

ಸಹ ಸಂಪಾದಕರು

• ಡಾ. ಎಸ್. ಎಂ. ನಾಲತವಾಡ • ಡಾ. ಎಂ. ಎಸ್. ಮಾಗಣಗೇರಿ

Scanned by CamScanner

# ಪರಿವಿಡಿ


೧. ಡಾ. ವಿ. ಕೃ. ಗೋಕಾಕರ–ಭಾರತ ಸಿಂಧು
ರಶ್ಮಿಯಲ್ಲಿ ಮಾನವ ಸಂಬಂಧಗಳು ೧

• ಡಾ. ಜಿನದತ್ತ ಅ. ಹಡಗಲಿ

೨. ದಾಸೋಹ : ಸಾಮಾಜಿಕ ಭದ್ರತೆ ೫

• ಡಾ. ಅಮರೇಶ ನುಗಡೋಣಿ

೩. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತೆ ಕೃಷ್ಣಾ ಸೋಬ್ತಿ ೧೩

• ಡಾ. ಎಸ್. ಟಿ. ಮೇರವಾಡೆ

೪. ಜನಪದರಲ್ಲಿನ ನಂಬಿಕೆಗಳು ೨೨

• ಡಾ. ಆರ್. ವಿ. ಪಾಟೀಲ

೫. ಬಸವನ ಬಾಗೇವಾಡಿಯ ಶ್ರೀ ಮ. ನಿ. ಪ್ರ ಮುರುಘೇಂದ್ರ
ಶಿವಯೋಗಿಗಳ ಜೀವನ ದರ್ಶನ ೪೭

• ಪ್ರೊ. ಬಿ. ಬಿ. ಡೆಂಗನವರ

೬. ಕನ್ನಡ ಕಾವ್ಯ ಪರಂಪರೆ ಮತ್ತು ಪ್ರಸ್ತುತತೆ ೫೭

• ಡಾ. ಕಲ್ಯಾಣರಾವ ಜಿ. ಪಾಟೀಲ

೭. ಕಾದಂಬರಿ ಸಾರ್ವಭೌಮ ಅ.ನ.ಕೃ. ೭೦

• ಡಾ. ಎಂ. ಎಸ್. ಮಾಗಣಗೇರಿ

೮. ಯಕ್ಷಗಾನ ಒಂದು ಅವಲೋಕನ ೭೮

• ಎಸ್. ಹಳ್ಳಿಕೇರಿ

೯. ೧೨ ನೇ ಶತಮಾನದ ವಚನಕಾರರ ಅನುಭಾವ ಸಾಹಿತ್ಯ ೮೧

• ಪ್ರೊ. ದೀಪಾ ಸಂಕಪಾಳೆ

೧೦. ದಲಿತತೆ ಮತ್ತು ಶೋಷಣೆ ೮೪

• ಶ್ರೀ ಜಗದೀಶ ಎಂ. ಬಡಿಗೇರ

೧೧. ಬಾನು ಮುಷ್ತಾಕ್ ಅವರ ಕಥೆಗಳಲ್ಲಿ ಯಾಜಮಾನ್ಯ
ಮತ್ತು ಪ್ರತಿರೋಧದ ನೆಲೆಗಳು ೯೦

• ಟಿ. ಎಸ್. ಮಹಾಲಕ್ಷ್ಮಿ




Scanned by CamScanner

# ಬಸವನ ಬಾಗೇವಾಡಿಯ ಶ್ರೀ ಮ. ನಿ. ಪ್ರ ಮುರುಘೇಂದ್ರ ಶಿವಯೋಗಿಗಳ ಜೀವನ ದರ್ಶನ

• ಪ್ರೊ. ಬಿ. ಬಿ. ಡೆಂಗನವರ

"ನಾಡಿನ ತುಂಬ ನೂರು ಜಗದ್ಗುರು, ಇರುವುದು ಜಗವೊಂದೆ, ಕಾಡಿನ ತುಂಬಾ ಬಣ್ಣದ ಹೂಗಳು, ವಾಸನೆ ಕೆಲವೊಂದೆ"; ಹೀಗೆಂದು ನಾಡಿನ ಹೆಸರಾಂತ ಕವಿಗಳಾದ ಚೆನ್ನವೀರ ಕಣವಿ ಹಾಡಿದಂತೆ ಸ್ವಾಮಿಗಳಿಗೆ ಕಾವಿ, ಕಪನಿ ಇದ್ದರೆ ಸಾಲದು ವೇಷಕ್ಕೆ ತಕ್ಕ ವಿದ್ಯೆ, ತ್ಯಾಗ, ತಪಸ್ಸು, ಸೇವೆಗಳ ಸಾಕಾರರು ವಿರಳ ಅಂತ ವಿರಳರಲ್ಲಿ ವಿರಳರು ಶ್ರೀ ಮುರುಘೇಂದ್ರ ಶ್ರೀಗಳು ಕರ್ನಾಟಕದಲ್ಲಿ ಬಹಳಷ್ಟು ಲಿಂಗಾಯತ ಮಠಗಳಿವೆ ಇವುಗಳಲ್ಲಿ ಬಡಮಠಗಳಿವೆ, ಶ್ರೀಮಂತಮಠಗಳಿವೆ ವಿರಕ್ತ ಮತ್ತು ಗುರುಪೀಠಗಳಿವೆ. ಆಧುನಿಕ ಪೂರ್ವದಲ್ಲಿ ಈ ಮಠಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿದ್ದವು ಹಾದಿ ಹೋಕರಿಗೆ ಆಶ್ರಯತಾಣಗಳಾಗಿದ್ದವು ಆದರೆ ಇಂದು ಆಧುನಿಕತೆಯು ಪ್ರಭಾವದಿಂದಾಗಿ ಸಮಾಜಮುಖಿಯಾಗಿ ಹಲವಾರು ವಿನೂತನರಚನಾತ್ಮಕ ಕಾರ್ಯಗಳಿಂದ ಜನರ ಕಣ್ಣು ತೆರೆಸಿ ಶಿಕ್ಷಣ, ಸಮಾಜ, ಧರ್ಮ, ಆಧ್ಯಾತ್ಮ, ಪ್ರವಚನ, ಪುರಾಣ, ಸಂಸ್ಕೃತಿ ಹೀಗೆ ಎಲ್ಲಂದದ ದುಡಿಮೆಯಿಂದ ಸಾಂಸ್ಕೃತಿಕ ಶಕ್ತಿ ಕೇಂದ್ರಗಳಾಗಿ ರೂಪುಗೊಂಡಿವೆ.

ಬಾಗೇವಾಡಿಯ ಶ್ರೀಮಠದ ಹಿರಿಯ ಪೀಠಾಧ್ಯಕ್ಷರಾದ ಶ್ರೀ ಮುರುಘೇಂದ್ರ ಶ್ರೀಗಳು ವಿಜಾಪುರ ತಾಲ್ಲೂಕಿನ ಶಿರಭೂರ ಗ್ರಾಮದ ವೇದಮೂರ್ತಿ ಶಿವಲಿಂಗಯ್ಯ ಹಾಗೂ ಸಾತ್ವಿಕಶಿರೋಮಣಿ ಶರಣೆ ಶ್ರೀಮತಿ ಸುಮಿತ್ರಾಬಾಯಿ ಪುಣ್ಯಗರ್ಭದಲ್ಲಿ ಜನಿಸಿದ ಸುಕೃತಶಾಲಿಗಳು ಸಂಪ್ರದಾಯದಂತೆ ತಾಯಿ ಸುಮಿತ್ರಾಬಾಯಿಯವರ ತವರೂರಾದ ವಿಜಾಪುರ ತಾಲ್ಲೂಕಿನ ಕಟ್ಟಕಡೆಯ ಹಳ್ಳಿ ತೋಟಗಾರಿಕೆ ಬೆಳೆಗಳಿಗೆ ಹೆಸರುವಾಸಿಯಾದ ಕರ್ನಾಟಕ ಮಹಾರಾಷ್ಟ್ರ ಗಡಿ ಭಾಗದಲ್ಲಿರುವ ಕನಮಡಿಯಲ್ಲಿ ಜನಿಸಿದರು. ಲೋಕದ ಮಕ್ಕಳಿಗಿಂತ ಭಿನ್ನವಾದ ಮಗು ಒಂದು ವಾರದ ವರೆಗೆ ಕಣ್ಣುತೆರೆಯದೆ ಆಹಾರ ಸೇವಿಸದೆ ತೆಪ್ಪಗೆ ಬಿದ್ದಿರುವುದನ್ನು ಕಂಡು ಮನೆಯವರು ಗಾಬರಿಗೊಡು ಶ್ರೀಗಳ ತಾಯಿಯ ತಾಯಿಯಾದ ರಾಚಮ್ಮನ್ನವರು ಅಥಣಿ ಮುರುಘೇಂದ್ರ ಶೀಗಳ ಆದ್ಯ ಶಿಷ್ಯರು ಕೊಕಟನೂರಿನ ಶ್ರೀ ಮುರುಘೇಂದ್ರಾರ್ಯರ



Scanned by CamScanner

ಕನಮಡಿಯಲ್ಲಿರುವ ಕರ್ತೃ ಗದ್ದುಗೆಗೆ ಭಯ-ಭಕ್ತಿಯಿಂದ ಬೇಡಿಕೊಂಡು ಹರಕೆಹೊತ್ತು ನನ್ನ ಮೊಮ್ಮಗನಿಗೆ ಮುರುಘೇಂದ್ರನೆಂದು ನಾಮಕರಣ ಮಾಡುವುದಾಗಿ ಭಾಷೆಯಿಟ್ಟು ಹಿಂದುರುಗಿ ಮನೆಗೆ ಬರುವಷ್ಟರಲ್ಲಿ ಒಂಬತ್ತು ದಿನದ ಕೂಸು ತನ್ನ ತೀಕ್ಷ್ಣವಾದ ಕಣ್ಣುಗಳನ್ನು ತೆರೆದು ಕೈಕಾಲು ಬಡಿದು ಕೆಕೆ ಹಾಕುತ್ತ ಮಂದಹಾಸವನ್ನು ಬೀರುವುದನ್ನು ಕಂಡು ತಾಯಿ ಮತ್ತು ಆಯಿ ನೆಮ್ಮದಿಯ ನಿಟ್ಟುಸಿರು ಬಿಟ್ಟು ಶಿವಯೋಗಿಯ ಘನಮಹಿಮೆಯನ್ನು ಬಾಯಿತುಂಬಾ ಹೊಗಳಿ ಕೃತಜ್ಞತೆಯನ್ನು ಸಮರ್ಪಿಸಿದರು. ಮಾತಾಪಿತರಂತೆ ಸಂಪನ್ನತೆ, ಸದ್ಧರ್ಮ, ನಯವಿನಯ, ಸದಾಚಾರ, ಸದ್ಭಕ್ತಿ, ಸತ್ಕ್ರೀಯಾಶೀಲತೆ ಗುರುಗಳ ಸಾಕಾರ ಮೂರ್ತಿಗಳಾಗಿ ರೂಪಗೊಂಡು ಬೆಳೆದರು. ಇವರ ಪ್ರಾಥಮಿಕ ಶಿಕ್ಷಣ ಸ್ವಗ್ರಾಮ ಶಿರಬೂರಿನಲ್ಲಿಯೇ ಆಯಿತು. ನಂತರ ಸೋದರಮಾವನವರು ಸುಕ್ಷೇತ್ರ ಜೇವರಗಿ ವಿರಕ್ತಮಠದ ಪೀಠಾದಿಪತಿಗಳೂ ಆದ ಪೂಜ್ಯ ಶ್ರೀ ಶಾಂತಲಿಂಗ ಮಹಾ ಶಿವಯೋಗಿಗಳ ಶ್ರೀ ರಕ್ಷೆಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದರು. ಅವರ ಅರಿವಿನಾಗರ ವಿಸ್ತಾರಗೊಳ್ಳುತ್ತಾ ಹೋಗುತ್ತದೆ. ಮುಂದೆ ಇಲಕಲ್ಲದ ಚಿಃಜ್ಯೋತಿ ಶೀ ಮ.ನಿ.ಪ್ರ ಮಹಾಂತಶಿವಯೋಗಿಗಳ ಪುಣ್ಯ ಸನ್ನಿಧಾನದಲ್ಲಿ ಕೆಲಕಾಲವಿದ್ದು ಪದವಿಪೂರ್ವ, ಪದವಿಶಿಕ್ಷಣ ಪಡೆದು ಪ್ರತಿಭಾಪೂರ್ಣ ವಿಧ್ಯಾರ್ಥಿಗಳೆಂದು ಸೈ ಎನಸಿಕೊಂಡರು. ಇವರ ಒಲವು ನಿಲುವು, ಆಚಾರ ವಿಚಾರ ರೀತಿ-ನೀತಿ, ನಡೆ-ನುಡಿಗಳ ನಾಡಿಮಿಡಿತವನ್ನು ಬಲ್ಲ ಮನಿಪ್ರ ಶಿವಲಿಂಗ ಸ್ವಾಮಿಗಳು ಯೋಚಿಸಿ ಇವನಿಗೆ ಲೌಕಿಕ ವಿದ್ಯೆ ಸಲ್ಲದು ಇತ ಲೋಕಕಲ್ಯಾಣಕ್ಕಾಗಿ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅನುಪಮ ವಿದ್ಯೆಯನ್ನು ಕೊಡಿಸುವುದು ಉಚಿತ ವೆಂದರಿತ ಶ್ರೀ ಶಿವಲಿಂಗಶ್ರೀಗಳು ವಿರಕ್ತರ ವಿಶ್ವವಿದ್ಯಾಲಯವೆಂದೇ ಖ್ಯಾತಿವೆತ್ತ ಶಿವಯೋಗಮಂದಿರದಲ್ಲಿ ಧಾರ್ಮಿಕ ಶಿಕ್ಷಣ ಪಡೆಯಲಿಕ್ಕೆಂದು ಹಾನಗಲ್ಲ ಪೀಠದ ಅಧ್ಯಕ್ಷರೂ ಹಾಗೂ ಶಿವಯೋಗಮಂದಿರದ ತಪೋನಿಧಿಗಳು ಆದ ಸದಾಶಿವ ಮಹಾ ಸನ್ನಿಧಿಗಳ ಸನ್ನಿಧಾನಕ್ಕೆ ಒಪ್ಪಿಸಿದರು ಅಲ್ಲಿಯೇ ಎರಡು ವರ್ಷ ಶೃದ್ಧಾ, ಭಕ್ತಿಯಿಂದ ಅಂತಃಕರಣಶುದ್ಧಿಯಿಂದ ಶಿವಾನುಭವ ಹಾಗೂ ಸಂಸ್ಕೃತ ಅಧ್ಯಯನವನ್ನು ಅತ್ಯಂತ ನಿಷ್ಠೆಯಿಂದ ಕಲಿತು ದಾರ್ಶನಿಕ ವಿದ್ಯೆಯಲ್ಲಿ ಹರಿಗಡಿಯದ ವಯಸ್ಸು ಕ್ರಿಯಾಶೀಲ ಹಾಗೂ ಪ್ರಗತಿಶೀಲ ಮನಸ್ಸುಗಳಿಂದ ಶ್ರೀಗಳು ವಯಸ್ಸಿಗೆಮೀರಿದ ಅನುಭವಗಳ ಆಗರವಾಗಿ ತಮ್ಮ ವ್ಯಕ್ತಿತ್ವವನ್ನು ಅತ್ಯಂತ ಜಾಗರೂಕತೆಯಿಂದ ನಿರ್ಮಿಸಿಕೊಂಡು ನಾಡವರ ಗಮನಸೆಳೆದರು.

ಶಿವಯೋಗಮಂದಿರದ ನಿರ್ಮಲ ಪರಿಸರ, ದರ್ಶನ ಶಾಸ್ತ್ರದ ನಿರಂತರ ಅಭ್ಯಾಸ ಗುರುವೃಂದ ಹಾಗೂ ಸದಾಶಿವ ಶ್ರೀಗಳ ಪ್ರವಚನ ಇವರನ್ನು ಸಂಪ್ರೀತಿಯಿಂದ ಸಮ್ಮೋಹನಗೊಳಿಸಿದವು ಇವರ ಬಾಳ ಬಾಂದಳದಲ್ಲಿ ಶಶಿಯುದಿಸಿ ಬಂದಂತೆ ಹೊಸ ಮನ್ವಂತರದ ಹೊಸಗಾಳಿ ಬೀಸಿ ಜೀವನದ ದಿಕ್ಕೆ ಬದಲಾಯಿತು.



Scanned by CamScanner

ಹೊಸಭಾವ, ಹೊಸ ಆಸೆ ಮೂಡಿ ಲೋಕ ಕಲ್ಯಾಣಕ್ಕೆ ಅಣಿಯಾದರು. ಮುಂದೆ ಶ್ರೀ ಮುರುಘೇಂದ್ರಮಹಾಸ್ವಾಮಿಗಳು ಆಧ್ಯಾತ್ಮದ ವಿಶ್ವವಿದ್ಯಾಲಯದಯದಂತಿರುವ ಗದುಗಿನ ಜಗದ್ಗುರು ಶಿದ್ಲಿಂಗ ಮಹಾಸ್ವಾಮಿಗಳ ಸನ್ನಿಧಾನಕ್ಕೆ ಬಂದು ನಯವಿನಯಗಳಿಂದ ನಮಿಸಿ ಅವರ ದಿವ್ಯದರ್ಶನದಿಂದ ಪುನೀತರಾಗಿ ಸತತ ಮೂರು ವರ್ಷಗಳ ವರೆಗೆ ಮಂಗಲಾಶ್ರಯ ಪಡೆದು ಪುರಾಣ ಪ್ರವಚನಗಳನ್ನು ನಡೆಸಿ ಅದರಲ್ಲಿ ಸಿದ್ಧಿಯನ್ನು ಸಾಧಿಸಿ ಪುರಾಣ ಪ್ರವಚನ ಪಟುಗಳೆಂಬ ಕೀರ್ತನೆಗೆ ಬಾಜನರಾದರು. ಶ್ರೀಗಳ ಪರುಷಹಸ್ತದಿಂದ ಆಶೀರ್ವಚನ ಪಡೆದು ತತ್ವ ಪ್ರಸಾರಕ್ಕಾಗಿ ನಾಡಿನ ವಿವಿಧ ಭಾಗಗಳಿಗೆ ಹೋಗಿ ತಮ್ಮ ಅಸ್ಖಲಿತ, ನಿರರ್ಗಳವಾದ ಮಾತುಗಳಿಂದ ಜನ ಆಕರ್ಷಿತರಾಗಿ ಅವರ ಅಮೃತವಾಣಿಗೆ ಮನಸೋತು ಅವರ ಮದುರವಾಣಿಯನ್ನು ಕೇಳುವುದಕ್ಕೆ ಜನಸಾಗರ ಕಾತುರವಾಗಿರುತಿತ್ತು, ಕಿಕ್ಕಿರಿದು ಸೇರುತ್ತಿತ್ತು. ಮಾತಿನ ಮೋಡಿಯಿಂದ ಜನರನ್ನು ಸಮ್ಮೋಹನಗೊಳಿಸುವಧಿ: ಶಕ್ತಿ ಅವರಲ್ಲಿತ್ತು. "ಮಠದಿಂದ ಘಟಬೆಳಗಬಾರದು ಘಟದಿಂದ ಮಠ ಬೆಳಗಬೇಕು" ಇದು ಹಾನಗಲ್ಲ ಗುರು ಕುಮಾರ ಶಿವಯೋಗಿಗಳ ಅಮೃತವಾಣಿ ಈ ವಾಣಿ ಅಕ್ಷರಶ: ಮುರುಘೇಂದ್ರ ಶ್ರೀಗಳಿಗೆ ಅನ್ವಯವಾಗುತ್ತದೆ.

ಕನ್ನಡ ನಾಡಿನಲ್ಲಿ ಹಲವಾರು ಪುಣ್ಯಕ್ಷೇತ್ರಗಳಿವೆ. ಅವುಗಳಲ್ಲಿ ಬಾಗೇವಾಡಿಯೂ ಒಂದು ಹನ್ನೆರಡನೆಯ ಶತಮಾನಕ್ಕಿಂತ ಪೂರ್ವದಲ್ಲಿ ಇದನ್ನು ಇಂಗಳೇಶ್ವರ ಬಾಗೇವಾಡಿ ಎಂದು ಕರೆಯುತ್ತಿದ್ದರು. ಇಂಗಳೇಶ್ವರವು ಬಾಗೇವಾಡಿಯಿಂದ ಆರು ಮೈಲುಗಳ ಅಂದರೆ ಹದಿನೈದು ಕಿಲೋಮಿಟರ ಅಂತರದಲ್ಲಿದೆ. ಈಗ ಇದೊಂದು ಹಳ್ಳಿ ಹಿಂದೆ ಇದು ಒಂದು ಪ್ರಸಿದ್ಧವಾದ ಪಟ್ಟಣವಾಗಿತ್ತು. ಯುಗಪುರುಷ, ಸಮಾಜಸುಧಾರಕ, ವಿಚಾರವಾದಿ, ಸಮತಾವಾದಿ, ಮಹಾಮಾನವತಾವಾದಿ, ಸಮಾಜವಾದಿ, ಸ್ತ್ರೀ ಸಮಾನತೆಯ ಹರಿಕಾರ, ಭಕ್ತಿಭಂಢಾರಿ, ವಚನಸಾಹಿತ್ಯದ ನಿರ್ಮಾತೃ ಜಗದ್ಗುರು ಅಣ್ಣ ಬಸವಣ್ಣನವರ ಪ್ರಭಾವದಿಂದ ಬಸವನಬಾಗೇವಾಡಿಯೆಂದು ಪ್ರಸಿದ್ಧವಾಯಿತು. ಹನ್ನೆರಡನೆಯ ಶತಮಾನದಲ್ಲಿ ಇದು ಒಂದು ಮಹಾ ಅಗ್ರಹಾರವಾಗಿತ್ತು, ವೇದವಿದ್ಯೆಯ ಕಲಿಕೆಯ ಕೇಂದ್ರವಾಗಿತ್ತು. 'ಬಸವಬೆಳಗು' ಎಂಬ ಕೃತಿಯಲ್ಲಿ ಡಾ॥ ಆರ್.ಸಿ.ಮುದ್ದೇಬಿಹಾಳ ಅವರು ಬಾಗೇವಾಡಿ ಕುರಿತು ಹೀಗೆ ಹಾಡಿದ್ದಾರೆ.

ಭಾರತದ ಕರುನಾಡು ವೀರಪುರುಷರನಾಡು
ಭಾರಿ ಫಲಕಾರಿ ಈ ನಾಡು॥ ಧರ್ಮವನು
ಸಾರಿ ಹೇಳುತಿಹ ಮಹಾನಾಡು॥
ವಿಜಾಪುರ ಎಂಬುದು ವಿಜಯ ಹೊಂದಿದ ಊರು
ವಿಜಾಪುರದಾಚೆ ಯರನಾಳ। ಮುಂದಿರುವ
ಗಜಾಲು ಊರ ಬಾಗೋಡಿ॥



Scanned by CamScanner

ಟಕ್ಕಳಕಿ ಯರನಾಳ ನಾಗೂರ ಹುಣಿಶ್ಯಾಳ
ಇವಣಗಿ ಇತ್ತ ಇಂಗಳೇಶ್ವರ। ಸುತ್ತೆಲ್ಲ
ನಡುವಿನ ಊರ ಬಾಗೋಡಿ॥

ಹೀಗೆಂದು ಕಾವ್ಯದಲ್ಲಿ ಡಾ॥ಮುದ್ದೇಬಿಹಾಳ ಅವರು ಸೊಗಸಾಗಿ ಚಿತ್ರಿಸಿದ್ದಾರೆ. ಬಾಗೇವಾಡಿ ಶರಣರ ಪವಿತ್ರ ಕ್ಷೇತ್ರ, ಬಸವ ಜನ್ಮಭೂಮಿ, ಸನಾತನ ಸಂಸ್ಕೃತಿಯ ಹಿನ್ನೆಲೆಯಿರುವ ಈ ಊರಿಗೆ ಪ್ರಾಚೀನತೆಯಿದೆ, ಪೌರಾಣಿಕಹಿನ್ನೆಲೆಯಿದೆ. ಇಂತಹ ಐತಿಹಾಸ ಹಿನ್ನೆಲೆಯಿರುವ ಬಸವನಬಾಗೇವಾಡಿಯ ಹೃದಯ ಭಾಗದಲ್ಲಿ ವಿರಕ್ತ ಮಠವಿದೆ.ಬಾಗೇವಾಡಿಯ ವಿರಕ್ತಮಠ ಅಥಣಿಯ ಗಚ್ಚಿನಮಠದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಚನ್ನಬಸವ ಶಿವಯೋಗಿಗಳು ಭಾವಿ ಮರಿದೇವರ ಬರುವಿಕೆಗಾಗಿ ಜಾತಕಪಕ್ಷಿಯಂತೆ ಕಾದುಕುಳಿತಿದ್ದರು. ಪೂಜ್ಯ ಶ್ರೀ ಮುರುಘೇಂದ್ರ ಶ್ರೀಗಳು ಅಥಣಿಗೆ ಬಂದರು. ಘನಮಹಿಮರಾದ ಮುರಘೇಂದ್ರ ಶಿವಯೋಗಿಗಳ ಕರ್ತೃ ಗದ್ದುಗೆಯ ಹಾಗೂ ಚೆನ್ನಬಸವ ಶಿವಯೋಗಿಗಳ ದರ್ಶನ ಪಡೆಯಲೆಂದು ಧಾವಿಸಿ ಮಠದಲ್ಲಿ ಅಡಿಯಿಡುತ್ತಲೆ ಪೂಜ್ಯ ಚೆನ್ನಬಸವ ಶ್ರೀಗಳು ಹರ್ಷಚಿತ್ತರಾಗಿ ಬಯಸಿದ ಭಾಗ್ಯ ಬಾಗಿಲಿಗೆ ಬಂದಿತೆಂದು ಆತ್ಮೀಯತೆಯಿಂದ ಬರಮಾಡಿಕೊಂಡು ಉಪಚರಿಸಿ ಅಂತರಂಗದ ಬಯಕೆಯನ್ನು ನಿವೇದಿಸಿಕೊಂಡರು. ಈ ಅನಿರಿಕ್ಷೀತ ಆಹ್ವಾನ ಮುರುಘೇಂದ್ರ ಶ್ರೀಗಳನ್ನು ದಿಗ್ಭ್ರಮೆಗೊಳಿಸಿತಾದರೂ ಮರುಮಾತನಾಡದೆ ಚೆನ್ನಬಸವ ಅಪ್ಪಗಳ ಮಾತನ್ನು ನಿರಾಕರಿಸದೆ ಸ್ವಮನಸ್ಸಿನಿಂದ ಒಪ್ಪಿಗೆ ಸೂಚಿಸಿದರು. ಕೆಲದಿನಗಳ ನಂತರ ಉಬಯ ಶ್ರೀಗಳು ಬಾಗೇವಾಡಿಯ ವೀರಕ್ತ ಮಠಕ್ಕೆ ಕರೆಯಿಸಿ ತಾವು ಬಂದ ಉದ್ದೇಶವನ್ನು ಬಹಿರಂಗಗೊಳಿಸಿದರು. ಎಲ್ಲರೂ ಒಮ್ಮನಸ್ಸಿನಿಂದ ಒಪ್ಪಿ ಸಮ್ಮತಿಯನ್ನು ಸೂಚಿಸಿ ಸಂತೋಷದಿಂದ ಜಯಘೋಷ ಹಾಕಿ ಸಾಷ್ಟಾಂಗ ನಮಸ್ಕಾರ ಹಾಕಿ ಶುಭ ಆಶೀರ್ವಾದ ಪಡೆದುಕೊಂಡು ನಿರ್ಗಮಿಸಿದರು.

ಕೆಲದಿನಗಳವರೆಗೆ ಇಬ್ಬರೂ ಶ್ರೀಗಳು ಬಸವನ ಬಾಗೇವಾಡಿಯಲ್ಲಿಯೇ ಇದ್ದು ನಂತರ ಇರ್ವ ಶ್ರೀಗಳು ಅಥಣಿಗೆ ಹೊರಟುಬಂದರು. ದಿನ ಕಳೆದಂತೆ ಹಿರಿಯ ಚೇತನ ಚನ್ನಬಸವ ಶ್ರೀಗಳ ಆರೋಗ್ಯ ಕ್ಷೀಣಿಸುತ್ತ ಹೊರಟಿತು ತ್ರಿಕರಣ ಶುದ್ಧಿಯಿಂದ ಅಲ್ಲಿನ ಮರಿ ದೇವರು ಭಕ್ತಿಭಾವದಿಂದ ಅವರ ಶುಶ್ರೂಷೆಯನ್ನು ಅಂತಃಕರಣದಿಂದ ಗೈದರು ಶಿವನ ಅಪ್ಪಣೆಯೆಂತೆ ದಿನಾಂಕ ೧೩-೦೪-೧೯೭೮ ರಂದು ಮಧ್ಯಾಹ್ನ ಮೂರುಗಂಟೆ ಇಪ್ಪತ್ತು ನಿಮಿಷಕ್ಕೆ ಯುವಶ್ರೀ ಮಹಂತರ ತೊಡೆಗಳ ಮೇಲೆ ತಲೆಯನಿರಿಸಿ ಕೊನೆಯುಸಿರುಎಳೆದರು. ಇಡೀ ಅಥಣಿ ಹಾಗೂ ಸುತ್ತಮುತ್ತಲಿನ ಭಕ್ತ ಸಮೂಹ ಶೋಕಸಾಗರದಲ್ಲಿ ಮುಳುಗಿತು. ಅಥಣಿಯ ದಿವ್ಯಚೇತನ ಪಂಚಭೂತಗಳಲ್ಲಿ ಲೀನವಾಯಿತು. ನಂತರ ಶ್ರೀ ಮುರುಘೇಂದ್ರ ಸ್ವಾಮಿಗಳು ಭಾರವಾದ ಹೃದಯದಿಂದ ತವನಿಧಿಯನ್ನು ಕಳೆದುಕೊಂಡು ತಬ್ಬಲಿಗಳಾಗಿ ಬಾಗೇವಾಡಿಯ ಶ್ರೀ ಮಠಕ್ಕೆ ದಯಮಾಡಿಸಿದರು.



Scanned by CamScanner

ಮಠದ ಹೊಸ್ತಿಲಲ್ಲಿ ಕಾಲಿರಿಸುತ್ತಲೇ, ಹುಲ್ಲು, ಕಲ್ಲು, ಕಸಕಡ್ಡಿಗಳನ್ನು ಕಣ್ಣಾರೆ ಕಂಡು ಬಹಳ ನೊಂದುಕೊಂಡು ನಿಸ್ತೇಜರಾಗಿ ಉತ್ಸಾಹ ಕುಂದಿ ದಿಕ್ಕು ತೋಚದಂತಾಗಿ ಚಿಂತಾಕ್ರಾಂತರಾದರು. ನೊಂದ ಮನಸ್ಸಿಗೆ ಸಾಂತ್ವಾನ ಹೇಳಲು ಶ್ರೀ ಮಠದಲ್ಲಿ ಯಾರೋಬ್ಬರು ಇರಲಿಲ್ಲ. ಮಠವೆಲ್ಲ ಜೀರ್ಣಾವಸ್ಥೆಯಲ್ಲಿತ್ತು, ಮೇಲ್ಛಾವಣಿ ಸಂಪೂರ್ಣ ಶಿಥಿಲಗೊಂಡಿತ್ತು, ಪೂಜಾ ಸಾಮಗ್ರಿಗಳೆಲ್ಲ ಕಿಲುಬುಗಟ್ಟು ಉಪಯೊಗಕ್ಕೆಬಾರದೆ, ಹಿತ್ತಾಳೆ, ತಾಮ್ರದ ಪಾತ್ರೆಗಳು ಹಾಗೂ ಪತ್ರಗಳಿಂದ ತುಂಬಿದ ಮುರುಕಲು ಪೆಟ್ಟಿಗೆ ಇವೆ ಮಠದ ಆಸ್ತಿಯಾಗಿದ್ದವು. ಇವುಗಳನ್ನು ಬಿಟ್ಟರೆ ಮಠದಲ್ಲಿ ಹೇಳಿಕೊಳ್ಳುವಂತಹ ಯಾವ ವಸ್ತುಗಳಿರಲಿಲ್ಲ. ಇಂತಹ ಸ್ಥಿತಿಯಲ್ಲಿ ತಮಗೆ ಶ್ರೀರಕ್ಷೆಯಾಗಿದ್ದ ಚೆನ್ನಬಸವ ಶ್ರೀಗಳನ್ನು ಕಳೆದುಕೊಂಡ ನೋವು ಒಂದಕಡೆಯಾದರೆ ಇಂತಹ ಅವ್ಯವಸ್ಥೆಯ ಆಗರವಾಗಿರುವ ಶ್ರೀ ಮಠದ ಕರ್ಣದಾರತ್ವ ಅಧೀರರನ್ನಾಗಿಸಿತು. ಆದರೂ ದೃತಿಗೇಡದೆ ಸವಾಲಾಗಿ ಸ್ವೀಕರಿಸಿ ಭವಿಷ್ಯದಲ್ಲಿ ಶ್ರೀ ಮಠಕ್ಕೆ ಕಾಯಕಲ್ಪ ನೀಡಿ ಬಾಗೇವಾಡಿ ಸಮಸ್ತ ಭಕ್ತಸಮುದಾಯವನ್ನು ವಿಸ್ವಾಸಕ್ಕೆ ತೆಗೆದುಕೊಂಡು ಮುನ್ನಡೆಸಬೇಕಾದರೆ ನಾಲ್ಕಾರು ತಿಂಗಳುಗಳೇ ಗತಿಸಿದವು. ಆರಂಭದ ದಿನಗಳಲ್ಲಿ ಊರಿನ ಜನ ಸ್ಪಂದಿಸಲಿಲ್ಲ, ಮಾತನಾಡದೆ ಮೌನದಿಂದಲೇ ಬಂದು ಕರ್ತೃ ಗದ್ದುಗೆಗೆ ನಮಸ್ಕರಿಸಿ ಮರಳುತಿದ್ದರು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಶ್ರೀಗಳು ತಮ್ಮ ಕಾಯಕದಲ್ಲಿ ನಿರತರಾಗಿ ತಮ್ಮ ದೈನಂದಿನ ಕಾರ್ಯ ಚಟುವಟಿಕೆಯಲ್ಲಿ ತೊಡಗಿದ್ದರು. ನಿಜವಾಗಿಯೂ ಮಹಾತ್ಮರ ಬದುಕು ಕಡು ಕಷ್ಟಗಳ ಮಧ್ಯದಲ್ಲಿಯೇ ಕಳೆಯುವುದು ಹಲವಾರು ಮಹಾತ್ಮರ ಚರಿತ್ರೆಗಳಿಂದ ತಿಳಿದುಬರುತ್ತದೆ. ಸುಖದ ಸುಪ್ಪತ್ತಿಗೆಯಲ್ಲಿ ಮಲಗುವವನು ಸಕಲ ಭೋಗಭಾಗ್ಯಗಳನ್ನು ಬಯಸಿ ಮನಸಿಚ್ಛೆ ಬೋಗಿಸುವವನು ಎಂದಿಗೂ ಮಹಾತ್ಮ ನಾಗಲಾರವೆಂಬ ಮಾತೊಂದಿದೆ. ಒಂದು ದಿನ ಇದ್ದಕಿದ್ದಂತೆ ಮುರುಘೇಂದ್ರ ಶ್ರೀಗಳು ಪೂಜೆ ತೀರಿಸಿಕೊಂಡು ಕರ್ತೃ ಗದ್ದುಗೆಯ ಬಳಿಬಂದು ಗುರುದೇವ ತಮ್ಮ ಪಾವನ ಜೀವನ ಎಲ್ಲರಿಗೂ ಪರಿಚಯಿಸಿ, ಬಸವ ಧರ್ಮವನ್ನು ಭೋಧಿಸಿ, ಭಕ್ತ ಕುಲವನ್ನು ಮೇಲೆತ್ತಿ ಸುಖ ಶಾಂತಿ ನೆಮ್ಮದಿಯಿಂದ ಬಾಳುವಂತೆ ಮಾಡಬೇಕೆಂದು ನಿವೇದಿಸಿಕೊಂಡರು. ಅವರ ಭಕ್ತಿಯ ಬಾರಕೆ ಕಣ್ಣುಗಳು ಮುಚ್ಚಿದವು. ಆವುದೋ ಅವ್ಯಕ್ತ ಶಕ್ತಿಯೊಂದು ದೇಹವನ್ನು ಪ್ರವೇಶಿಸಿದಂತಾಗಿ ರೋಮಾಂಚನವಾಯಿತು. ಚೈತನ್ಯ ಚಿಗುರಿತು ಚಿಂತೆ ಚಿಂತನವಾಗಿ ಪರಿವರ್ತನೆಗೊಂಡಿತು. ಕಣ್ತೆರೆದು ನೋಡುತ್ತಿದ್ದಂತೆ ವಿಸ್ಮಯ ಕಾದಿತ್ತು. ಐದಾರು ತಿಂಗಳುಗಳಿಂದ ಮಠದ ಕಡೆಗೆ ಮುಖಮಾಡದೆ ಊರಿನ ಗಣ್ಯಮಾನ್ಯರೆಲ್ಲ ಹೂ-ಹಣ್ಣು ಕಾಯಿಗಳೊಂದಿಗೆ ಕರ್ಪೂರ ಹೂ-ಹಾರಗಳಿಂದ ಶ್ರೀಗಳ ಚರಣ ಕಮಲಗಳಿಗೆ ಶಿರಬಾಗಿ ವಿನಮ್ರದಿಂದ ನಮಿಸಿದರು. ಇಷ್ಟು ದಿನ ಮಠಕ್ಕೆ ಬಾರದಕ್ಕೆ ಕ್ಷಮೆ ಯಾಚಿಸಿತ್ತು ಇನ್ನೂ ಮುಂದೆ ನಾವು ಭಕ್ತಿಯಿಂದ ಮಠದ



Scanned by CamScanner

ಎಲ್ಲ ಕ್ರೀಯಾ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಿ ಶ್ರೀ ಮಠದ ಅಭಿವೃದ್ಧಿಗೆ ಶ್ರಮಿಸುತ್ತೇವೆಂಬ ಭಾಷೆ ನೀಡಿದರು. ಇದರಿಂದ ಶ್ರೀಗಳು ಸಂಪ್ರೀತರಾದರು ಶ್ರೀಗಳು ಬಂದ ಭಕ್ತರನ್ನು ಮನಸಾರೆ ಹರಿಸಿ ಆಶೀರ್ವಾದಿಸಿದರು. ಈ ಘಟನೆಯಿಂದ ಸ್ವಾಮೀಜಿಯವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಕರ್ತೃ ಗದ್ದುಗೆಗೆ ಹೋಗಿ ಹಣೆಮನಿದು ಹೇ ಘನ ಮಹಿಮಾ ನಿನ್ನ ಲೀಲೆ ಅಸಾಮಾನ್ಯ ವಾದುದು ನಾನು ಧನ್ಯನಾದೆ ನಿನ್ನ ಕರುಣೆಯ ಕಣ್ಗಾವಲಿನಲಿ ನಾನು ಅಡಿಯಿಡುವೆ. ನಿನ್ನ ಅಭಯ ಹಸ್ತ ನನ್ನ ಮೇಲಿರಲಿ ನಿನ್ನ ಮಮತೆಯ ಮಡಿಲಿನಲ್ಲಿ ನಾನು ನಿತ್ಯ ನಲಿಯುವೆ. ಸದಾ ನಿನ್ನ ಪರುಷ ಹಸ್ತ ನನ್ನ ಮೇಲಿರಲಿ ನಿನ್ನ ಕೃಪೆಯಿಂದ ನಾನು ಶ್ರೀ ಮಠದ ಉದ್ಧಾರಕ್ಕೆ ಅಣಿಯಾಗುವೆ ಎಂದು ಸಂಕಲ್ಪ ಮಾಡಿ ತಮ್ಮ ಕಾಯಕದಲ್ಲಿ ನಿರತರಾದರು. ದಿನೆದಿನೆ ಅವರು ಪ್ರಗತಿಪಥದಲ್ಲಿ ದಾಪುಗಾಲು ಹಾಕುತ್ತ ನಡೆದು ಇತಿಹಾಸ ನಿರ್ಮಿಸಿದ್ದು ರೋಚಕ ಕಥೆ.

ದಿನದಿನಕ್ಕೆ ಮಠಕ್ಕೆಬರುವ ಭಕ್ತರ ಸಂಖ್ಯೆ ಬೆಳೆಯುತ್ತ ನಡೆಯಿತು. ಸಹಾಯ ಸಹಕಾರಗಳು ನಿರೀಕ್ಷೆಗೂ ಮೀರಿ ದೊರೆಯುತ್ತ ಸಾಗಿತು. ಕೆಲದಿನಗಳಲ್ಲಿಯೇ ಊರಿನ ಹಿರಿಯ ಭಕ್ತರೆಲ್ಲರೂ ಒಂದು ಗೂಡಿ ಒಮ್ಮನಸ್ಸಿನಿಂದ ಶ್ರೀಗಳ ಪೀಠಾರೋಹಣ ಕಾರ್ಯವನ್ನು ಅಭೂತಪೂರ್ವವಾಗಿ ನೆರವೇರಿಸಬೇಕೆಂದು ನಿಶ್ಚಯಿಸಿದರು. ಲಕ್ಷಾಂತರ ಹಣ ಸಾಕಷ್ಟು ದವಸಧಾನ್ಯಗಳನ್ನು ಸಂಗ್ರಹಿಸಿದರು. ಮಠದ ಜೀರ್ಣೋದ್ಧಾರ ಕಾರ್ಯ ಬರದಿಂದ ಸಾಗಿತು. ಸುಣ್ಣ ಬಣ್ಣಗಳಿಂದ ಮಠದ ಅಲಂಕಾರದಿಂದ ಶೋಭಾಯಮಾನವಾಗಿ ಕಂಗೊಳಿಸ ಲಾರಂಭಿಸಿತು ದಿನಾಂಕ ೨೪-೧೦-೧೯೭೭ ರಂದು ವಿಜೃಂಭಣೆಯಿಂದ ಶ್ರೀಗಳ ಪಟ್ಟಾಭಿಷೇಕ ಮಹೋತ್ಸವ ಶ್ರೀ ಮ.ನಿ.ಪ್ರ. ಶಾಂತ ಲಿಂಗಮಹಾಸ್ವಾಮಿಗಳ, ಷಣ್ಮುಖ ಶಿವಯೋಗಿ ಸಂಸ್ಥಾನಮಠ ಜೇವರಗಿ ಇವರಿಂದ ಶ್ರೀ ಮುರುಘೇಂದ್ರ ಶಿವಯೋಗಿಗಳಿಗೆ ಪಟ್ಟಾಧಿಕಾರವನ್ನು ಅನುಗ್ರಹಿಸಲಾಯಿತು. ಇಲಕಲ್ಲ, ರಟಗಲ್ಲ, ಭರತನೂರ, ಯರನಾಳ, ಸೊನ್ನದ ಮೊದಲಾದ ಕಡೆಗಳಿಂದ ಹರಗುರು, ಚರಮೂರ್ತಿಗಳು, ಅಸಂಖ್ಯಾತ ಭಕ್ತರು ಆಗಮಿಸಿ ಪೀಠಾರೋಹಣ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಭಕ್ತರ ಇಚ್ಛೆಯಂತೆ ಶಿರಗುಪ್ಪಿ, ಡಂಬಳ, ಬಳಗಾನೂರ, ಭರತನೂರ, ಕನಮಡಿ ಮೊದಲಾದ ಊರುಗಳನ್ನು ಸಂಚರಿಸಿ ಪುರಾಣ ಪ್ರವಚನ ಕಾರ್ಯ ಮುಗಿಸಿ ಒಂದು ದಿನ ಶಿವಯೋಗಿಗಳು ಪ್ರವಚನ ಕಾರ್ಯಾರ್ಥ ಬೇರೆಕಡೆ ಬೀಳೂರ ಮಾರ್ಗವಾಗಿ ಹೊರಟಿದ್ದರು. ಲೀಲಾಮೂರ್ತಿಗಳಾದ ಪೂಜ್ಯ ಶ್ರೀ ಗುರುಬಸವರಾರ್ಯ ಕರ್ತೃಗದ್ದುಗೆಯ ಬಳಿ ಕುಳಿತು ಮಧ್ಯಾಹ್ನದ ಪೂಜೆಯನ್ನು ಭಯ-ಭಕ್ತಿಯಿಂದ ತೀರಿಸಿಕೊಂಡು ಪ್ರಸಾದ ತೆಗೆದುಕೊಂಡು ಹೋಗಲು ಸಿದ್ಧರಾಗಿ ನಿಂತರು. ಇದ್ದಕ್ಕಿದ್ದಹಾಗೆ ಆಗೋಂದು ಅಚ್ಚರಿ ಕಾಯ್ದಿತ್ತು. ಅಂದು ಬಸವ ಜಯಂತಿ ಇದ್ದುದರಿಂದ ಬಸವಜಯಂತಿಯನ್ನು ಅದ್ದೂರಿಯಿಂದ ಆಚರಿಸಲು ಭಕ್ತ ಸಮೂಹ ಊರಿನ ಸಮಸ್ತ ಗಣ್ಯ ಮಾನ್ಯರು,



Scanned by CamScanner

[illegible] ಶರಣ ಸಂಕುಲ ಸಮಾವೇಶಗೊಂಡಿತ್ತು. ಅಂದಿನ ಸಮಾರಂಭಕ್ಕೆ ಸುಕ್ಷೇತ್ರ ಇಂಚಗೇರಿಯ ಮಹಾದೇವಪ್ಪನವರು ಆಗಮಿಸಬೇಕಾಗಿತ್ತು ಕಾರಣಾಂತರಗಳಿಂದ ಅವರು ಬಾರದೆ ಇದ್ದುದಕ್ಕೆ ಮಠದ ಭಕ್ತರು ಕಾರ್ಯಕ್ರಮದ ಸಂಘಟಕರು ಚಿಂತಾಕ್ರಾಂತರಾದರು ಅಂದಿನ ಬಸವ ಜಯಂತಿ ಕಾರ್ಯಕ್ರಮಕ್ಕೆ ಅನಿರೀಕ್ಷಿತವಾಗಿ ಆಗಮಿಸಿದ ಶ್ರೀ ಮುರುಘೇಂದ್ರ ಶ್ರೀಗಳ ಬಳಿ ಭಕ್ತರು ಊರಿನ ಗಣ್ಯಾತಿಗಣ್ಯರು ಬಂದು ಇಂದಿನ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಉತ್ಸವಕ್ಕೆ ಚಾಲನೆ ನೀಡಬೇಕೆಂದು ಕೇಳಿಕೊಂಡಾಗ "ಬಯಸದೆ ಬಂದುದು ಲಿಂಗಭೋಗ" ಎಂಬ ವಾಣಿಯಂತೆ ಬಸವಣ್ಣನ್ನವರೆ, ಗುರುಬಸವ ಶಿವಯೋಗಿಗಳೇ ಕರೆಸಿಕೊಂಡಿದ್ದಾರೆ ಎಂಬಂತೆ ಅವರ ಆಗಮನ ವಸಂತಗಾಳಿ ಸುಳಿದಂತೆ ಅಲ್ಲಿ ಸೇರಿದವರಲ್ಲಿ ಒಂದು ಬಗೆಯ ಸಂಚಲನ ಮೂಡುತ್ತದೆ. ಶ್ರೀಗಳು ಅಲ್ಲಿ ನೆರೆದ ಎಲ್ಲ ಸಮಸ್ತರನ್ನು ಪ್ರೀತಿಯಿಂದ ಮಾತನಾಡಿಸಿ ಆನಂದಮಯ ವಾತಾವರಣ ನಿರ್ಮಿಸುತ್ತಾರೆ. ಅವರ ಮಾತು ನಿರರ್ಗಳ, ತುಂಬಸರಳ ಅಷ್ಟೇ ಅಸ್ಖಲಿತ ಸತ್ವಪೂರ್ಣ ಒಮ್ಮೊಮ್ಮೊ ಧುಮ್ಮಿಕ್ಕುವ ಜೋಗ ಜಲಪಾತ ಮತ್ತೋಮ್ಮೆ ಹಿರಿಹೊಳಿಗಂಗವ್ವಸಾಗಿಬಂಧಾಂಗ ಒಂದುವರೆ ಗಂಟೆ ಬೀಳೂರ ಅಪ್ಪಗಳು ಹಾಗೂ ವಿಶ್ವಗುರು ಬಸವಣ್ಣನವರ ಪ್ರವಚನವನ್ನು ಜನಮೆಚ್ಚುವಂತೆ ಹೇಳಿದರು. ಜನ ಅಷ್ಟಕ್ಕೆ ತೃಪ್ತರಾಗದೆ ಶ್ರೀ ಎಡಿಯೂರ ಸಿದ್ದಲಿಂಗೇಶ್ವರರ ಪುರಾಣ ಹೇಳಬೇಕೆಂದು ವಿನಂತಿಸಿಕೊಂಡಾಗ ನಿರಾಕರಿಸಲಾಗದೆ ಒಪ್ಪಿ ಸತತ ಹದಿಮೂರುದಿನಗಳ ಪರ್ಯಂತ ಪ್ರವಚನಮಾಡಿ ಜನರ ಹೃದಯ ತಣಿಸಿದರು. ಮತ್ತೆ ಕೆಲದಿನಗಳನಂತರ ಬೀಳೂರಿಗೆ ಬಂದು ವಿಶ್ವಗುರು ಬಸವಣ್ಣನವರ ಕುರಿತು ಹದಿಮೂರು ದಿನಗಳವರೆಗೆ ಪ್ರವಚನ ಹೇಳಿ ಪೂಜ್ಯ ಗುರುಬಸವರಾರ್ಯ ಕರ್ತೃಗದ್ದುಗೆಯ ಮಂದಿರ ಮೇಲ್ಛಾವಣಿಗೆ ಸುಮಾರು ಮೂವತ್ತೈದು ವರ್ಷಗಳಿಂದ ಗೋಪುರಕಳಸವಿಲ್ಲದೆ ಹಾಗೆಯೇ ಉಳಿದಿತ್ತು. ಶ್ರೀಗಳ ಉಪದೇಶಕ್ಕೊಲಿದ ಸಾ॥ ಮಲ್ಲಾಬಾದಿಯ ವೇದಮೂರ್ತಿ ಮಲ್ಲಯ್ಯ ಹಿರೇಮಠ ಇವರು ಪೂರ್ಣಗೊಳಿಸಿ ಮಠದ ಘನತೆ ಗೌರವವನ್ನು ಎತ್ತಿ ಹಿಡಿದರು.

ಶ್ರೀಗಳು ಭಕ್ತರ ಬೇಡಿಕೆಯನ್ನು ಮನ್ನಿಸಿ ಶ್ರೀ ಬಸವೇಶ್ವರ ದೇವಾಲಯದ ವಿಶಾಲ ಮೈದಾನದಲ್ಲಿ ಭವ್ಯಮಂಟಪದಲ್ಲಿ ಭೀಮಕವಿ ವಿರಚಿತ 'ಬಸವಪುರಾಣ'ವನ್ನು ಬಸವಜಂಯಂತಿಯ ಮಂಗಲಮೂಹೂರ್ತದಲ್ಲಿ ಪ್ರಾರಂಭಿಸಿ ಕಾರ್ತಿಕ ಮಾಸದ ಶುಭಗಳಿಗೆಯಲ್ಲಿ ಮಂಗಲ ಹೇಳಿದರು. ಆರು ತಿಂಗಳವರೆಗೆ ಸುಧೀರ್ಘವಾಗಿ, ಸುಂದರವಾಗಿ, ಸರಳವಾಗಿ, ಹೃದಯಂಗಮಯವಾಗಿ ಅಣ್ಣನ ಪುಣ್ಯ ನೆಲದಲ್ಲಿ ಸಮಸ್ತರನ್ನು ಸದ್ಭಕ್ತಿಯ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿ ಬಾಗೇವಾಡಿಯ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದ ಶ್ರೇಯಸ್ಸು ಇವರಿಗಿದೆ.

ಬ್ರಹ್ಮಾನಂದಂ ಪರಮಸುಖದಂ ಕೇವಲಂ ಜ್ಞಾನ ಮೂರ್ತಿಂ
ದ್ವಂದಾತೀತಂ ಗಗನ ಸದೃಶಂ ತತ್ವಮ ಸ್ಯಾದಿಲಕ್ಷ್ಯಂ



Scanned by CamScanner

ಏಕಂ ನಿತ್ಯಂ ವಿಮಲಮಚಲಂ ಸರ್ವಧೀಃ ಸಾಕ್ಷಿಚೇತಂ
ಭಾವಾತೀತಂ ತ್ರಿಗುಣರಹಿತಂ ಸದ್ಗುರುಂ ತಂ ನಮಾಮಿ
ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪಿ
ಸರ್ವಾಂತರಾತ್ಮಾ ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಂ
ಸಾಕ್ಷಿ ಚೇತಾ ಕೇವಲೋ ನಿರ್ಗುಣಶ್ಚ

ಜ್ಞಾನಿಗಳಿಗೆ ದೇಶ ಕಾಲ ಸ್ಥಿತಿಯೆಂಬ ಪರಿಧಿಯಾಗಲಿ ಮಿತಿಯಾಗಲಿ ಇಲ್ಲ. ಅವರು ಇಡೀ ವಿಶ್ವಕ್ಕೆ ಸಂಬಂಧ ಪಟ್ಟವರು ಎಲ್ಲ ಕಾಲಕ್ಕೂ ಸಲ್ಲುವವರು. ಯಾವುದೇ ದೇಶದಲ್ಲಿ ಯಾರೇ ಯಾವುದೇ ವಿಷಯದಲ್ಲಿ ಜ್ಞಾನಾರ್ಜನೆ ಮಾಡುವಾಗ ತಮ್ಮ ದೇಶದ ಜ್ಞಾನಿಗಳ ಅಧ್ಯಯನದೊಂದಿಗೆ ಇತರ ದೇಶಗಳ ಜ್ಞಾನಿಗಳ ಅಧ್ಯಯನ ಮಾಡುವುದರಿಂದ ಜ್ಞಾನಾರ್ಥಿಯ ಜ್ಞಾನ ತುಂಬಾ ವಿಸ್ತೃತವಾಗಿ, ಗಂಭೀರವಾಗಿ ಗಟ್ಟಿಗೊಳ್ಳುತ್ತದೆ. ಆತ್ಮವಿಶ್ವಾಸದ ಜೊತೆಗೆ ಇತರರ ಜ್ಞಾನವನ್ನೂ ವ್ಯಕ್ತಿತ್ವವನ್ನು ಗೌರವಿಸುವ ಸುಸಂಸ್ಕಾರ ಬೆಳೆಯುತ್ತದೆ. ಬದುಕಿಗೊಂದು ಸಾರ್ಥಕತೆ, ಬೆಲೆ ಬರುತ್ತದೆ. ಹಿರಿಯರು ನಿರ್ಮಿಸಿದ ಹಾದಿಯಲ್ಲಿ ನಿರಾಯಾಸವಾಗಿ ನಡೆಯುತ್ತಾ ಬದುಕು ಸಾಗಿಸುವುದು ಸುಲಭ. ಇದು ಪ್ರವಾಹದಲ್ಲಿ ತೇಲಿದಂತೆ ಆದರೆ ಕೆಲವರು ತೇಲುತ್ತಲೇ ಈಜುತ್ತಾರೆ. ಪ್ರವಾಹಕ್ಕೆ ಭಿನ್ನವಾದ ಗುರಿಗಳನ್ನು ಗುರುತಿಸಿಕೊಳ್ಳುತ್ತಾರೆ. ಹೊಸ ಹಾದಿಯ ನಿರ್ಮಾಣದ ತುಡಿತ ಹೊಂದಿರುತ್ತಾರೆ. ಅಂತವರು ಅಪರೂಪ ಇಂಥ ಅಪರೂಪದಲ್ಲಿ ಪೂಜ್ಯ ಶ್ರೀ ಮುರುಘೇಂದ್ರ ಶ್ರೀಗಳು ಒಬ್ಬರು.

ಶ್ರೀ ಮುರುಘೇಂದ್ರಪ್ಪನವರು ಭಕ್ತರ ಬೇಡಿಕೆಯನ್ನು ಮನ್ನಿಸಿ ಬಸವೇಶ್ವರ ದೇವಾಲಯದ ಪವಿತ್ರವಾದ, ವಿಶಾಲವಾದ ಪ್ರಾಂಗಣದಲ್ಲಿ ಭೀಮಕವಿಯ ವಿರಚಿತ ಬಸವಪುರಾಣವನ್ನು ಬಸವ ಜಯಂತಿಯ ಮಂಗಲ ಮೂಹೂರ್ತದಲ್ಲಿ ಪ್ರಾರಂಭಿಸಿ ಕಾರ್ತಿಕ ಮಾಸದ ಶುಭಗಳಿಗೆಯಲ್ಲಿ ಮಂಗಲ ಹಾಡಿದರು. ಆರು ತಿಂಗಳವರೆಗೆ ಸುಧೀರ್ಘವಾಗಿ, ಸುಂದರವಾಗಿ, ಸರಳವಾಗಿ, ಹೃದಯಂಗಮವಾಗಿ ಜನಮನ ಸೂರೆಗೊಳ್ಳುವಂತೆ ಅಣ್ಣನ ಪುಣ್ಯದ ನೆಲದಲ್ಲಿ ಸಮಸ್ತ ಜನ ಸದ್ಭಕ್ತಿಯ ಸನ್ಮಾರ್ಗದಲ್ಲಿ ಮುನ್ನಡೆಯುವಂತೆ ಮಿಂಚಿನ ಸಂಚಲವನ್ನುಂಟು ಮಾಡಿ ಜನರಲ್ಲಿ ಅಮಿತಾನಂದವನ್ನು ಉಂಟುಮಾಡಿ ಕೃತಾರ್ಥರಾದರು. ಪುರಾಣದ ಮಹಾಮಂಗಲೋತ್ಸವ ದಿನಾಂಕ ೧೬, ೧೭, ೧೮–೧೧೮೩ರಂದು ವೈಭವದಿಂದ ಜರುಗಿತು ನಾಡಿನ ಬೇರೆ ಬೇರೆ ಭಾಗಗಳಿಂದ ಜನ ಆಗಮಿಸಿದ್ದರು. ಹಾಗೂ ಸಂತ, ಮಹಾಂತರು, ಅನುಭಾವಿಗಳು, ದಾರ್ಶನಿಕರು, ಹರ–ಚರ ಗುರುಮೂರ್ತಿಗಳು ಸಮಾವೇಶಗೊಂಡಿದ್ದು ಆ ಸನ್ನಿವೇಶ ನೆನಪಿಸಿಕೊಂಡರೆ ಮೈರೋಮಾಂಚನ ಗೊಳ್ಳುತ್ತದೆ. ಇಡೀ ಬಾಗೇವಾಡಿಯಲ್ಲಿ ಹಬ್ಬದ ಸಡಗರ ಆ ಸೌಂದರ್ಯದ ಸವಿಯನ್ನು ನೋಡಿ ಆನಂದಿಸಿದ ಕಣ್ಣ ಮನಗಳು ಧನ್ಯೋಹಂ ಧನ್ಯಃ.



Scanned by CamScanner

ಸಾವಿರ ಬಳೆಚೂರಲ್ಲಿ ಒಂದು ಮಿಂಚು ಶ್ರೇಷ್ಠ
ಸಾವಿರ ಮಿಂಚುಗಳಲ್ಲಿ ಒಂದು ಮುತ್ತು ಶ್ರೇಷ್ಠ
ಸಾವಿರ ಮುತ್ತುಗಳಲ್ಲಿ ಒಂದು ವಜ್ರ ಶ್ರೇಷ್ಠ
ಸಾವಿರ ವಜ್ರಗಳಲ್ಲಿ ಒಂದು ಮಾಣಿಕ್ಯ ಶ್ರೇಷ್ಠ

ಹಾಗೆಯೇ ನಮ್ಮ ನಾಡಿನ ಅನೇಕ ಸ್ವಾಮಿಗಳಲ್ಲಿ ಶ್ರೇಷ್ಠ ವ್ಯಕ್ತಿತ್ವ ಪೂಜ್ಯರಾದ ಶ್ರೀ ಮುರುಘೇಂದ್ರ ಅಪ್ಪಗಳದ್ದು. ದಿನಾಂಕ ೧೮-೧೧-೧೯೮೩ ರಂದು ಅರವತ್ತು ಮೂರು ಪುರಾತನರ ಮಹಾಮಂಟಪ ಪೂಜಾಮ ಹೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು ಆ ಮಂಟಪಕ್ಕೆ ಬಸವಾದಿ ಪ್ರಮಥರ ಮಂಟಪವೆಂದು ಹೆಸರಿಸಲಾಗಿತ್ತು. ಮಹಾಮಂಠಪ ಪೂಜಾಮಹಾಮಹೋತ್ಸವವು ಶ್ರೀಶೈಲ ಜಗದ್ಗುರುಗಳಾದ ಉಮಾಪತಿ ಪಂಡಿತಾರಾಧ್ಯರಿಂದ ವಿಧಿವತ್ತಾಗಿ ವಿಜೃಂಬಣೆಯಿಂದ ನೆರವೇರಿತು ಪ್ರಸ್ತುತ ಪುಣ್ಯ ಕಾರ್ಯಗಳು ನಡೆದವು ಇಂಥ ಸಂದರ್ಭದಲ್ಲಿ ಒಂದು ಅನಿರೀಕ್ಷಿತ ಅಚಾತುರ್ಯ ಘಟನೆಯೊಂದು ನಡೆದು ಹೋಯಿತು ನಾಡಿಗೂ, ಧರ್ಮಕ್ಕೂ ತುಂಬಲಾರದ ನಷ್ಟವುಂಟಾಯಿತು. ಎರಡನೇದಿನದ ಶಿವಾನುಭವಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿ ಆಶೀರ್ವಚನ ನೀಡುತ್ತ "ನಮಗೆ ಕೈಲಾಸ ನಿಮಗೆ ಕಲ್ಯಾಣ" ಎಂದು ಹೇಳಿದ ಹಾನಗಲ್ಲದ ತಪೋನಿಧಿಗಳಾದ ಶ್ರೀ ಮ.ನಿ.ಪ್ರ. ಸದಾಶಿವ ಮಹಾ ಸ್ವಾಮಿಗಳು ಆಗಮಿಸಿ ಅಪಾರ ಪ್ರಸಾದ ರಾಶಿಯನ್ನು ನೋಡಿ ಸಂತಸಪಟ್ಟು ಪ್ರಸಾದದ ಮೇಲೆ ತಮ್ಮ ಪರುಷ ಹಸ್ತವನಿಟ್ಟು ನಗುನಗುತ್ತಲೇ ಕೆಳಕ್ಕೆ ಕುಸಿದರು ನೋಡುನೋಡುತ್ತಿದ್ದಂತೆಯೇ ಅವರು ಇಹಲೋಕತ್ಯಜಿಸಿದ್ದರು ನೆರೆದ ಭಕ್ತ ಸಮೂಹ ದುಃಖಸಾಗರದಲ್ಲಿ ಮುಳುಗಿ ಹೋಗಿತ್ತು "ಶರಣರ ಮಹಿಮೆ ಮರಣದಲ್ಲಿ ನೋಡು" ಎನ್ನುವಂತೆ ಶಿವನ ಸಾನಿಧ್ಯದಲ್ಲಿ ಶ್ರೀಗಳು ಲೀನವಾಗಿದ್ದರು. ಈ ಘಟನೆಯಿಂದ ಸಮಸ್ತ ಬಾಗೇವಾಡಿ ಜನ ಅಕ್ಷರಶಃ ಕಂಗಾಲಾಗಿದ್ದರು. ಚೇತರಿಸಿಕೊಳ್ಳಲು ಸುಮಾರು ದಿನಗಳು ಕಳೆದವು ಶ್ರೀಮುರುಘೇಂದ್ರ ಶ್ರೀಗಳಂತೂ ತುಂಬಾ ನೊಂದುಕೊಂಡು ಝರ್ಜರಿತರಾಗಿ ಮಠ ಸೇರಿದರು. ವಿಧಿಯಿಲ್ಲದೆ ಮತ್ತೆ ದೈನಂದಿನ ಕಾರ್ಯ ಚಟುವಟಿಕೆಗಳಿಗೆ ಅಣಿಯಾದರು. ಶ್ರೀ ಶಿವಯೋಗಿಗಳು ಜನಹಿತ ಕಲ್ಯಾಣಕ್ಕಾಗಿ ಅನೇಕ ಬಗೆಯ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಮೂರ್ತಿ ಚಿಕ್ಕದಾದರು ಕೀರ್ತಿ ದೊಡ್ಡದೆಂಬಂತೆ ಶ್ರೀ ಶಿವಲಿಂಗ ಶ್ರೀಗಳ ವಾಣಿಯಂತೆ ಮುಂದೆ ಬರುವವನಿಂದ ಮಠದ, ಊರಿನ ಕೀರ್ತಿಧ್ವಜ ಬಾನೆತ್ತರಕ್ಕೆ ಹಾರುತ್ತದೆಂದು ಹೇಳಿದ ಮಾತು ಈಗ ನಿಜವಾಗಿದೆ. ಇವರು ಕೇವಲ ಉತ್ಸವ ಮೂರ್ತಿಗಳಲ್ಲ ಉತ್ಸಾಹ ಮೂರ್ತಿಗಳಾಗಿದ್ದಾರೆ. ಶ್ರೀಗಳು ಎರಡು ಬಾರಿ ಅನುಷ್ಠಾನವನ್ನು ಯಶಸ್ವಿಯಾಗಿ ನೆರವೇರಿಸಿ ಸಫಲರಾಗಿದ್ದಾರೆ. ಈಗ ಮೂರನೆಯ ಬಾರಿ ವಿಜಾಪುರ ತಾಲ್ಲೂಕಿನ ಕನಮಡಿ ಹಾಗೂ ಮಹಾರಾಷ್ಟ್ರದ ಗಡಿ ಭಾಗದ ಜತ್ತ ತಾಲ್ಲೂಕಿನ ಮುಚ್ಚಂಡಿ



Scanned by CamScanner

ಧರಿದೇವರ ಗುಡ್ಡದಲ್ಲಿ ಅನುಷ್ಠಾನ ಮಾಡಲೆಂದು ದಿನಾಂಕ ೧೫-೧೨-೧೯೮೩ ರಂದು ಆಗಮಿಸಿದಾಗ ಕೆಲ ದುಷ್ಟ ಶಕ್ತಿಗಳು ವಿಘ್ನಗಳನ್ನು ಒಡ್ಡಿದಾಗ ಅವುಗಳಿಗೆ ಸೊಪ್ಪುಹಾಕದೆ ಕಿಂಚಿತ್ತು ವಿಚಲಿತರಾಗದೆ ಧೃತಿಗೆಡದೆ ಧರಿದೇವರು ಒಡ್ಡಿದ ಪರೀಕ್ಷೆ ಇದಾಗಿರಬಹುದೆಂದು ಸಾವದಾನದಿಂದ, ಸಮಾಧಾನದಿಂದಲೇ ಸಮತೆಸ್ಯೆರಣೆಯಿಂದಲೇ ಸತತ ಐವತ್ತು ದಿನಗಳವರೆಗೆ ಅನುಷ್ಟಾನಗೈದು ದಿನಾಂಕ ೨-೦೨-೧೯೮೪ ಗುರುವಾರದಂದು ಮಂಗಲ ಹೇಳಿ ನಾಡಿನ ಕ್ಷೇಮಾಭಿವೃದ್ಧಿಗೆ, ಭಕ್ತ ಜನಹಿತ ಚಿಂತನೆಗೆ ಅವರು ತಮ್ಮನ್ನು ತಾವು ತೇಯ್ದಿದ್ದಾರೆ.

ಪೂಜ್ಯ ಶ್ರೀ ಮುರುಘೇಂದ್ರ ಶ್ರೀಗಳ ಅನುಷ್ಠಾನದ ಪ್ರಭಾವದಿಂದಾಗಿ ಮಹಾರಾಷ್ಟ್ರದ ಹದಿನಾರು ವರುಷದ ಯುವಕ ಲಾಥೂರ ಜಿಲ್ಲೆಯ ನೀಲಗಂಗಾ ತಾಲ್ಲೂಕಿನ ತಾಂಬಾಳದ ಯುವಕ ವೇವಿಜಯಕುಮಾರ ಎಂಬ ಹೆಸರಿನ ಯುವಕ ಮನೆಬಿಟ್ಟು ಎರಡನೆ ಷಣ್ಮುಖ ಶಿವಯೋಗಿಗಳ ತಪೋ ಭೂಮಿಯಲ್ಲಿ ಅಖಂಡ ಸಿದ್ಧಿಯನ್ನು ಸಾಧಿಸಿ ಕೇಂದ್ರದ ಮಾಜಿ ಗ್ರಹ ಸಚಿವ ಶ್ರೀ ಶಿವರಾಜ ಪಾಟೀಲರಿಂದ ಬಾಲ ಶಿವಯೋಗಿ ಎಂಬ ಬಿರುದು ಪಡೆದು ಕೊಂಡಿರುವುದು. ನಮ್ಮ ಪೂಜ್ಯ ಶ್ರೀ ಮುರುಘೇಂದ್ರ ಶ್ರೀಗಳ ಪ್ರಭಾವದ ಫಲ. ಮುರುಘೇಂದ್ರ ಶ್ರೀಗಳ ಕರ್ತೃತ್ವ ಶಕ್ತಿ, ಅವರ ಮೃದುಸ್ವಭಾವ, ಜ್ಞಾನಶಕ್ತಿ, ಕ್ರೀಯಾಶಕ್ತಿ, ಇಚ್ಛಾಶಕ್ತಿ, ದೂರದೃಷ್ಟಿ, ಸಮಾಜದ ಹಿತಚಿಂತನೆ ಪುರಾಣ ಪ್ರವಚನಗಳ ಪ್ರಾವಿಣ್ಯತೆ ಮನಗಂಡ ಪಕ್ಕದ ಮಹಾರಾಷ್ಟ್ರದ ಬೀಳೂರಿನ ಗುರುಬಸವರಾರ್ಯ ಮಠಕ್ಕೆ ಅಧಿಪತಿಯನ್ನಾಗಿ ನಿಯಮಿಸಿ ಅಲ್ಲಿನ ಜನ ಅವರ ಮುಂದಾಳತ್ವದಲ್ಲಿ ಮಠದ ಕಾರ್ಯ ಚಟುವಟಿಕೆಗಳು ಚುರುಕಾಗಿ ನಡೆಯಲು ಸಾಧ್ಯದಾದುದಕ್ಕೆ ಹರ್ಷಚಿತ್ತರಾಗಿದ್ದಾರೆ. ಹಾಗೆಯೇ ಮಹಾರಾಷ್ಟ್ರದ ಜತ್ತ ತಾಲೂಕಿನ ಸಂಖ ವಿರಕ್ತ ಮಠದ ಕರ್ಣ ಧಾರತ್ವಕೂಡ ಇವರ ಹೆಗಲಿಗೆ ಬಿತ್ತು. ಅಲ್ಲಿಯೂ ಕೂಡ ಮಠದ ಶ್ರೇಯೋಭಿವೃದ್ದಿಗೆ ಅಹರ್ನಿಶದುಡಿದು ನಾಡಿನ ಹೆಸರಾಂತ ಮಠಗಳ ಪಟ್ಟಿಗೆ ಸೇರಲು ಕಾರಣಿಕರ್ತರಾಗಿದ್ದಾರೆ. ಹೀಗೆ ತ್ರಿವೇಣಿ ಸಂಗಮದ ಜಂಗಮಜಗದ್ಗುರುಯೆಂಬ ಕೀರ್ತಿಗೆ ಭಾಜನರಾಗಿದ್ದಾರೆ. ಮೂರು ವಿರಕ್ತ ಮಠಗಳ ಏಳ್ಗೆಗೆ ಅವಿರತ ಪರಿಶ್ರಮಿಸಿ ಅವುಗಳಿಗೆ ಕಾಯಕಲ್ಪ ನೀಡಿ ತಮ್ಮ ಗುರುತರ ಜವಾಬ್ದಾರಿಯನ್ನು ಶ್ರದ್ಧೆ, ನಿಷ್ಠೆ, ಭಕ್ತಿಯಿಂದ ನಿರ್ವಹಿಸುತ್ತ ಸಂತೃಪ್ತ ಅರವತ್ತು ವಸಂತಗಳ ಅಂಚಿನಲ್ಲಿರುವ ಶ್ರೀಗಳು ಇನ್ನೂ ನೂರಾರು ವಸಂತಗಳವರೆಗೆ ಆಯುರಾರೋಗ್ಯದಿಂದ ಇದ್ದು ಸಮಾಜೊಧರ್ಮಿಕ ಕಾರ್ಯಗಳನ್ನು ಮಾಡಲೆಂಬುದೆ ಸಕಲ ಬಕ್ತರ ಒತ್ತಾಸೆಯಾಗಿದೆ.

■■

---

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ ಬಿ.ಎಲ್.ಡಿ.ಇ. ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಸವನ ಬಾಗೇವಾಡಿ



Scanned by CamScanner

'ಭಾರತೀಯ ಸಾಹಿತ್ಯ : ಅಂತಾರಾಷ್ಟ್ರೀಯ ನೆಲೆಯಲ್ಲಿ' ಎಂಬ ವಿಷಯದ ಮೇಲೆ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದ್ದು ಈ ವಿಚಾರ ಸಂಕಿರಣದಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ವಿವಿಧ ಪ್ರಕಾರಗಳ, ಘಟ್ಟಗಳ ಕುರಿತು, ಕನ್ನಡ ಸಾಹಿತ್ಯದ ಸಮಗ್ರ ಕವಲುಗಳ ವಿವೇಚನೆ, ಚರ್ಚೆ, ಪರಿಶೀಲನೆ, ಸಂಶೋಧನೆ, ಚಿಂತನೆ, ಪರಿಚಯ ಕುರಿತಾದ ವಿಷಯಗಳ ಮೇಲೆ ಅಭ್ಯಾಸಪೂರ್ಣ ಸಂಪ್ರಬಂಧಗಳನ್ನು ಇಲ್ಲಿ ಸಂಪಾದಿಸಲಾಗಿದೆ. ಪ್ರಸ್ತುತ ಈ ಕೃತಿಯಲ್ಲಿ ವಿವಿಧ ವಿದ್ವಾಂಸರ ಲೇಖನಗಳು ತುಂಬಾ ವಿಭಿನ್ನ, ವಿಶೇಷ ಹಾಗೂ ಓದುವ ಅಭಿರುಚಿಯನ್ನು ಬೆಳೆಸುತ್ತವೆ. 'ವಿಹಂಗಮ' ಎಂಬ ಶೀರ್ಷಿಕೆಯೊಂದಿಗೆ ಈ ಸಂಪಾದನಾ ಗ್ರಂಥ ತಮ್ಮ ಕೈಯಲ್ಲಿರುವುದು. ಇಲ್ಲಿ ಪ್ರಕಾಶಿತಗೊಂಡ ಲೇಖಕರ ಪರಿಶ್ರಮ ಹಾಗೂ ಬಿ. ಎಲ್. ಡಿ. ಇ. ಸಂಸ್ಥೆಯವರು ಇಂಥ ಪ್ರಕಟಣೆ ಕಾರ್ಯ ಕೈಗೊಂಡಿರುವುದು ಸಾರ್ಥಕದ ಕೆಲಸ. ಇದು ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಯಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಹೊಸ ದಾಖಲೆಯಾದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಇಲ್ಲಿ ಮಂಡಿತವಾದ ಸಂಪ್ರಬಂಧಗಳನ್ನು ಸಂಕಲಿಸಿ ಸಂಪಾದಿಸಿದ ಗ್ರಂಥವಿದು. ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವವರಿಗೆ ಆಕರವಾಗಬಲ್ಲ ಗ್ರಂಥ ಎಂಬ ಸದಾಶಯ ನಮ್ಮದು. ಹಿರಿಯ, ಕಿರಿಯ, ಅಧ್ಯಯನಶೀಲ ಬರಹಗಾರರ ವಿಶಿಷ್ಟ ಬರವಣಿಗೆಯ ಸಂಗ್ರಹವಾಗಿದೆ. ವಿಭಿನ್ನ ಭಾವಗಳು, ಚಿಂತನೆಗಳು ಚರ್ಚೆಗಳು, ವಿವೇಚನೆಗಳು, ಪ್ರಸ್ತುತತೆಗಳು, ಅವಿಚ್ಛಿನ್ನ ಆಯಾಮಗಳು, ಶೋಧ, ನೋಟಗಳ ಕುರಿತು ಕನ್ನಡದ ಮನಸ್ಸುಗಳ, ಕನಸುಗಳ ಕನವರಿಕೆ, ಕಲ್ಪನೆ, ಸತ್ಯಶೋಧದ ವಿಷಯ ವಿಭಿನ್ನತೆಗಳಿಂದ ಕೂಡಿದೆ. ಕನ್ನಡ ಸಾಹಿತ್ಯದ ವಿವಿಧ ಕವಲುಗಳ ಸಮಗ್ರವಾದ ಅವಲೋಕನ ಸಂಕಲನವೇ ಈ ವಿಹಂಗಮ.

ಪ್ರಧಾನ ಸಂಪಾದಕರು
ಪ್ರೊ. ಬಿ.ಬಿ. ಡೆಂಗನವರ
ಡಾ. ಆರ್.ವಿ. ಪಾಟೀಲ

9 789383 813360
ISBN : 978-93-83813-36-0

ಸೌಮ್ಯ ಪ್ರಕಾಶನ, ವಿಜಯಪುರ

Scanned by CamScanner